**Misc No. : 01/2017**
**RW : 01**

**ದಿನಾಂಕ : 01/02/2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಅರ್ಜಿದಾರರ ಪರ ವಕೀಲರಿಂದ :-**

ಈ ಅರ್ಜಿಯನ್ನು ಯಾವ ಪರಿಹಾರ ಕೋರಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ನಾನು ಪಕ್ಷಗಾರನಲ್ಲ, ನಾನು ಅಧಿಕಾರ ಪತ್ರ ಪಡೆದು ಸಾಕ್ಷ್ಯ ನುಡಿಯುತ್ತಿದ್ದೇನೆ. ಶಂಕರವ್ವ ನನಗೆ ನಾಲ್ಕು ದಿನಗಳ ಹಿಂದೆ ಅಧಿಕಾರ ಪತ್ರ ನೀಡಿದ್ದಾರೆ. ಶಂಕರವ್ವನಿಗೆ 60 ವರ್ಷ ಆಗಿದೆ. ಅಧಿಕಾರ ಪತ್ರದಲ್ಲಿ ಆಕೆಗೆ ವಯಸ್ಸಾಗಿರುವ ಕಾರಣ ನನಗೆ ಸಾಕ್ಷ್ಯ ನುಡಿಯಲು ಅಧಿಕಾರ ಇದೆ ಎಂದು ಬರೆದಿದೆ. ಶಂಕರವ್ವ ತೇಗೂರಿನಲ್ಲಿ ವಾಸವಿರುತ್ತಾರೆ. ಆಕೆ ಧಾರವಾಡಕ್ಕೆ ಬರುವುದಿಲ್ಲ. ಶಂಕರವ್ವನಿಗೆ ಯಾವುದೇ ಕಾಯಿಲೆ ಇಲ್ಲ. ಅಧಿಕಾರ ಪತ್ರ ಬರೆದುಕೊಡುವ ಕಾಲಕ್ಕೆ ಆಕೆ ಧಾರವಾಡಕ್ಕೆ ಬಂದಿದ್ದಳು. ಶಂಕರವ್ವ ನ್ಯಾಯಾಲಯಕ್ಕೆ ಬಂದರೆ ನಿಜಸಂಗತಿ ಗೊತ್ತಾಗುತ್ತದೆ ಎಂದು ಖೊಟ್ಟಿ ಅಧಿಕಾರ ಪತ್ರ ಸೃಷ್ಟಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅರ್ಜಿದಾರರು ನನಗೆ ಗೊತ್ತಿಲ್ಲ. ಆಕೆ ಹುಲಕೊಪ್ಪದಲ್ಲಿ ಇರುತ್ತಾರೆ. ಹಳೆತೇಗೂರಿನಲ್ಲಿ ನಾನು ವಾಸವಿದ್ದೇನೆ. ಬಾಲ್ಯದಿಂದಲೂ ಅರ್ಜಿದಾರರು ಹುಲಕೊಪ್ಪದಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಅರ್ಜಿ ದಾಖಲಿಸುವ ಮುನ್ನ ದಾಖಲಾಗಿದ್ದ ದಾವೆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಅರ್ಜಿದಾರರ ಪರ ತೀರ್ಪಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. O.S. No. 348/2004 ಒಂದನೇ ಎದುರುದಾರರು ಮೃತ ಹೊಂದಿದ್ದ ಕಾರಣ ಆತನ ವಾರಸುದಾರರನ್ನು ದಾವೆಗೆ ಸೇರಿಸುವ ಸಲುವಾಗಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಜಿಲ್ಲಾ ನ್ಯಾಯಾಲಯದಲ್ಲಿ

**Misc No. : 01/2017**
**RW : 01**

ಮೇಲ್ಮನವಿ ಇದ್ದಾಗ ಒಂದನೇ ಎದುರುದಾರ ಮೃತ ಹೊಂದಿರುತ್ತಾನೆ ಎಂದರೆ ಸರಿ. ಅರ್ಜಿದಾರರಿಗೆ ಶಂಕರಗೌಡನ ಕಾನೂನುಬದ್ಧ ವಾರಸುದಾರರು ಯಾರು ಎಂದು ಗೊತ್ತಿರಲಿಲ್ಲ ಎಂದರೆ ಸರಿ. ಆಕೆ ತೇಗೂರು ಗ್ರಾಮಕ್ಕೆ ಬಂದು ವಾರಸುದಾರರ ಬಗ್ಗೆ ವಿಚಾರಿಸಿದರೂ ಮಾಹಿತಿ ಸಿಗಲಿಲ್ಲ ಆ ಕಾರಣ ಸಕಾಲದಲ್ಲಿ ಸೂಕ್ತ ಅರ್ಜಿಯನ್ನು ಸಲ್ಲಿಸಲು ಆಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಕಾಲದಲ್ಲಿ ಶಂಕರಗೌಡರವರ ವಾರಸುದಾರರನ್ನು ದಾವೆಗೆ ಸೇರಿಸದ ಕಾರಣ O.S.No.348/2004 ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರು ತನಗೆ ಮತ್ತೊಂದು ಅವಕಾಶ ನೀಡಿದರೆ ಸದರಿ ದಾವೆಯನ್ನು ಮುಂದುವರೆಸುವುದಾಗಿ ಈ ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕಾಲ ವಿಳಂಬವನ್ನು ಮನ್ನಾ ಮಾಡುವಂತೆ ಅರ್ಜಿದಾರರು ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. O.S.No.348/2004 ಅನ್ನು ಪುನರ್ ಸ್ಥಾಪಿಸುವಂತೆ ಆದೇಶ ಮಾಡಿದರೆ ನನಗೆ ತೊಂದರೆ ಇಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಅಧಿಕಾರ ಪತ್ರ ಪಡೆದು ನಾನು ಸಾಕ್ಷ್ಯ ನುಡಿಯುತ್ತಿರುವುದಾಗಿ ಬರೆದಿದೆ. ಉಳಿದ ವಿಚಾರ ನನಗೆ ಗೊತ್ತಿಲ್ಲ. ಅರ್ಜಿದಾರರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಧಾರವಾಡ.**

**Misc No. ៖ 01/2017**
**RW : 01**

**Misc No. : 01/2017**
**RW : 01**

**Misc No. : 01/2017**
**RW : 01**

**ಅ. ದಾ. ಸಂ. : 437/219**
**ಪಿ.ಡಬ್ಲ್ಯೂ : 01**

**ದಿನಾಂಕ : 27-12-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿಯ ಪರ ಶ್ರೀ. ಎ.ಡಿ.ಜಿ.ಪಿ. ರವರಿಂದ:-**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಒಂದರಿಂದ ಐದನೇ ತರಗತಿವರೆಗೆ ಉರ್ದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಮಾನ್ಯವಾಗಿ ಶಾಲೆಗೆ ಮಕ್ಕಳನ್ನು ಸೇರಿಸುವ ಸಮಯದಲ್ಲಿ ತಂದೆ ತಾಯಿ ನೀಡಿದ ಮಾಹಿತಿಯ ಆಧಾರ ಮೇಲೆ ಶಾಲಾ ದಾಖಲಾತಿಗಳು ನಮೂದು ಆಗಿರುತ್ತವೆ ಎಂದರೆ ಸರಿ. ನಿಮ್ಮನ್ನು ಶಾಲೆಗೆ ಸೇರಿಸುವಾಗ ಶಾಲಾ ದಾಖಲಾತಿಯಲ್ಲಿ ನಿಮ್ಮ ಹೆಸರನ್ನು ಮಹಮ್ಮದ್ ಅಲಿ ಖಮರಅಲಿ ಸಿಗನಳ್ಳಿ ಎಂದು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾಖಲಿಸುವ ಸಮಯದಲ್ಲಿ ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಧಾರವಾಡ.**